# ಕರ್ನಾಟಕ ಸರ್ಕಾರ ಶಾಲಾ ಶಿಕ್ಷಣ ಇಲಾಖೆ ಅಪರ ಆಯುಕ್ತರ ಕಛೇರಿ,
# ಐವಾನ್-ಇ-ಷಾಹಿ ಬಡಾವಣೆ ಹತ್ತಿರ ಕಲಬುರಗಿ

ಸಂಖ್ಯೆ: ಸಿ1(2) ಆಡಳಿತ ಸಾವರ್ಗಾವಣೆ/06/2025-26 ದಿನಾಂಕ: 04.06.2025

**ಪರಿಷ್ಕೃತ ಸು ತ್ತೋ ಲೆ**

ವಿಷಯ:- ಶಾಲಾ ಶಿಕ್ಷಣ ಇಲಾಖೆಯ ಕಲಬುರಗಿ ಆಯುಕ್ತಾಲಯ ವ್ಯಾಪ್ತಿಯ 2025-26ನೇ ಸಾಲಿನ ಬೋಧಕೇತರ ವೃಂದದ ಗ್ರೂಪ್-ಸಿ ಮತ್ತು ಗ್ರೂಪ್-ಡಿ ನೌಕರರ ವರ್ಗಾವಣೆ ಕುರಿತು

ಉಲ್ಲೇಖ:-
1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 14 ಸೇನೌವ 2025 ದಿನಾಂಕ: 12.05.2025.
2. ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ: 30.05.2025.
3. ಸರ್ಕಾರದ ಸುತ್ತೋಲೆ ಸಂಖ್ಯೆ: ಇಪಿ 209 ಎಸ್‌ಟಿಬಿ 2025 ದಿನಾಂಕ: 02.06.2025.
4. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ರವರ ಅಧಿಸೂಚನೆ ಪತ್ರ ಸಂಖ್ಯೆ: 1774254:ಡಿಪಿಐ-ಸಿಪಿಐ 0ಸಿ5-1(ಟಿಆರ್‌ಎನ್)/6/2025 ದಿನಾಂಕ: 30.05.2025.

<><><><>

ಉಲ್ಲೇಖ (1)ರ ಸರ್ಕಾರದ ಆದೇಶದನ್ವಯ 2025-26ನೇ ಸಾಲಿನ ವರ್ಗಾವಣೆ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ವರ್ಗಾವಣೆ ಪ್ರಕ್ರಿಯೆಯಲ್ಲಿ ಸಕ್ಷಮ ಪ್ರಾಧಿಕಾರವು ಸಾರ್ವಜನಿಕ ಹಿತದೃಷ್ಟಿಯಿಂದ ಪಾರದರ್ಶಕವಾಗಿ ಮಾಡಲು ಸೂಚಿಸಿ, ಗ್ರೂಪ್-ಎ, ಬಿ, ಸಿ ಮತ್ತು ಡಿ ಹುದ್ದೆಗಳಿಗೆ ಮಾಡಲಾಗುವ ವರ್ಗಾವಣೆ ಸಂಖ್ಯೆಯ ಆಯಾ ವೃಂದಗಳ ಕಾರ್ಯನಿರತ ವೃಂದ ಬಲದ ಶೇ.6ನ್ನು ಮೀರದಂತೆ ದಿನಾಂಕ: 15.05.2025 ರಿಂದ ದಿನಾಂಕ: 14.06.2025 ರವರಗೆ ಸಾರ್ವತ್ರಿಕ ವರ್ಗಾವಣೆ ಕೈಗೊಂಡು, ಗ್ರೂಪ್-ಸಿ ಮತ್ತು ಡಿ ವೃಂದದ ನೌಕರರಿಗೆ ಸಂಬಂಧಿಸಿದಂತೆ ಆಯಾ ನೇಮಕಾತಿ ಪ್ರಾಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿರುತ್ತದೆ.

ಈಗಾಗಲೇ ಉಲ್ಲೇಖ(2) ರಂತೆ ಕಲಬುರಗಿ ವಿಭಾಗದ ಬೋಧಕೇತರ ವೃಂದದ ಗ್ರೂಪ್-ಸಿ ಮತ್ತು ಡಿ ನೌಕರರ ಕೋರಿಕೆ ಮತ್ತು ಪರಸ್ಪರ ವರ್ಗಾವಣೆಯನ್ನು ಕಾರ್ಯನಿರತ ವೃಂದ ಬಲದ ಒಟ್ಟು ಶೇ 6 ರಷ್ಟು ಮಿರದಂತೆ ಹಾಗೂ ಸರ್ಕಾರ ಆದೇಶದಲ್ಲಿ ಸೂಚಿಸುವ ನಿರ್ದೇಶನಗಳನ್ನು ಪಾಲಿಸಿ, ವರ್ಗಾವಣೆ ಪ್ರಕ್ರಿಯೆಯನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಲು ವಿಭಾಗದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ) ರವರಿಗೆ ತಿಳಿಸಲಾಗಿದೆ.

ಮುಂದುವರೆದು, ಉಲ್ಲೇಖ (3)ರ ಸರ್ಕಾರದ ಸುತ್ತೋಲೆಯನ್ವಯ ವರ್ಗಾವಣೆಯನ್ನು ಕೌನ್ಸಲಿಂಗ್ ಪ್ರಕ್ರಿಯೆ ಮೂಲಕ ನಿರ್ವಹಿಸಲು ಈಗಾಗಲೇ ಶಾಲಾ ಶಿಕ್ಷಣ ಇಲಾಖೆಯ ಆಯುಕ್ತಾಲಯ, ಬೆಂಗಳೂರು ಇವರು ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದು, ಸದರಿ ತಂತ್ರಾಂಶವನ್ನು ಬಳಸಿ ಅಪರ ಆಯುಕ್ತರು, ಕಲಬುರಗಿ ಹಾಗೂ ಅಪರ ಆಯುಕ್ತರು, ಧಾರವಾಡ ಇವರು ಗ್ರೂಪ್-ಸಿ ಮತ್ತು ಡಿ ವೃಂದದ ನೌಕರರ ವರ್ಗಾವಣೆ ಪ್ರಕ್ರಿಯೆಯನ್ನು ಕೈಗೊಳ್ಳತಕ್ಕದ್ದು ಎಂದು ತಿಳಿಸಿರುತ್ತಾರೆ.

ಮುಂದುವರೆದು, ಉಲ್ಲೇಖ (3)ರ ಸರ್ಕಾರದ ಸುತ್ತೋಲೆಯನ್ವಯ ಕಲಬುರಗಿ ವಿಭಾಗದ ಗ್ರೂಪ್-ಸಿ ಮತ್ತು ಗ್ರೂಪ್-ಡಿ ವೃಂದದ ವರ್ಗಾವಣೆ ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸುವಂತೆ ಈ ಮೂಲಕ ತಿಳಿಸಿದೆ. ಕಲಬುರಗಿ ವಿಭಾಗದಲ್ಲಿ ಗ್ರೂಪ್-ಸಿ ಮತ್ತು ಡಿ ನೌಕರರ ವರ್ಗಾವಣೆ ಕೋರಿಕೆ ಮತ್ತು ಪರಸ್ಪರ ವರ್ಗಾವಣೆಯ ಮೂಲಕ ವರ್ಗಾವಣೆ ಕೈಗೊಳ್ಳಲಾಗುತ್ತಿದ್ದು, ಉಲ್ಲೇಖ (1), (2) & (4)ರ ಆದೇಶ/ ಸುತ್ತೋಲೆ/ ಅಧಿಸೂಚನೆಯಲ್ಲಿ ತಿಳಿಸಿರುವ ನಿರ್ದೇಶನದಂತೆ ಸಂಬಂಧಪಟ್ಟ ಪ್ರಾಧಿಕಾರಿಗಳು ಕಡ್ಡಾಯವಾಗಿ ಪಾಲಿಸತಕ್ಕದು.

**ಗ್ರೂಪ್-ಸಿ ಮತ್ತು ಗ್ರೂಪ್-ಡಿ ವೃಂದದ ನೌಕರರು ವರ್ಗಾವಣೆ ಅರ್ಜಿಗಳನ್ನು https://schooleducation.karnataka.gov.in ವೆಬ್‌ಸೈಟ್‌ನಲ್ಲಿ Non Teaching Transfer Softwareದಲ್ಲಿ ಸಲಿಸಲು ಅವಕಾಶ ಕಲ್ಪಿಸಲಾಗಿದೆ. ಆನ್‌ಲೈನ್‌ದಲ್ಲಿ ವರ್ಗಾವಣೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 07.06.2025 ರ (05.30ರ ಕಛೇರಿ ವೇಳೆಯ ವರೆಗೆ) ಆಗಿದ್ದು, ವರ್ಗಾವಣೆ ಅರ್ಜಿಗಳು ಆನ್‌ಲೈನ್ ಮೂಲಕ ಹೊರತುಪಡಿಸಿ, ಬೇರೆ ಯಾವ ಮಾರ್ಗದಲ್ಲಿ ಅರ್ಜಿಗಳು ಸ್ವೀಕೃತವಾಗಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.**

ಹಾಗೂ ಅಂತರ ವಿಭಾಗ ವರ್ಗಾವಣೆಗೆ ಸಂಬಂಧಿಸಿದಂತೆ ಉಲ್ಲೇಖ (1) ರ ಆದೇಶದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ನೆಲೆಸಿರುವ ಕಛೇರಿಗಳಿಗೆ ಸ್ಥಳಿಯ ವೃಂದ ಮತ್ತು ಮಿಕ್ಕುಳಿದ ವೃಂದದಗಳಲ್ಲಿನ ವಿವಿಧ ವೃಂದದ ಹುದ್ದೆಗಳ ಖಾಲಿ ಇರುವ ಹುದ್ದೆಗಳಿಗೆದುರಾಗಿ ನೇಮಕಾತಿ ಹೊಂದಿರುವ ನೌಕರರನ್ನು ನೇಮಕಾತಿ ದಿನಾಂಕದಿಂದ ಕನಿಷ್ಠ 10 ವರ್ಷಗಳ ವರೆವಿಗೂ ಕಲ್ಯಾಣ ಕರ್ನಾಟಕ ಪ್ರದೇಶ ಹೊರತುಪಡಿಸಿ ವರ್ಗಾವಣೆಗೆ ಅರ್ಹರಿರುವುದಿಲ್ಲ ಎಂಬ ಅಂಶವು ಗಮನದಲ್ಲಿರಿಸಿಕೊಂಡು ಅರ್ಜಿಗಳ ಪರಿಶೀಲನೆ ಮಾಡುವುದು.

**ಕಲಬುರಗಿ ಆಯುಕ್ತಾಲಯ ವ್ಯಾಪ್ತಿಯಲ್ಲಿನ ಬೋಧಕೇತರ ವೃಂದದ ನೌಕರರ ಗ್ರೂಪ್-ಸಿ ಮತ್ತು ಡಿ ನೌಕರರ ವರ್ಗಾವಣೆ ವೇಳಾ ಪಟ್ಟಿಯನ್ನು ಈ ಕೆಳಕಂಡತಿರುತ್ತದೆ.**

**ವರ್ಗಾವಣೆ ವೇಳಾಪಟ್ಟಿ:**

| ಕ್ರ.ಸಂ | ಕ್ರಮ ವಹಿಸಬೇಕಾದ ವಿವರ | ದಿನಾಂಕ | ಕ್ರಮ ವಹಿಸಬೇಕಾದ ಕಛೇರಿ | ಷರಾ |
|---|---|---|---|---|
| 1 | 2 | 3 | 4 | 5 |
| ವರ್ಗಾವಣೆ ಅರ್ಜಿಗಳನ್ನು ನೋಂದಾಯಿಸಿಕೊಳ್ಳುವ ಪ್ರಾಧಿಕಾರಿ:-<br>ವ್ಯಾಪ್ತಿಯ ಬಿ.ಇ.ಓ /ಉಪನಿರ್ದೇಶಕರು/ಸಹನಿರ್ದೇಶಕರು/ಕಛೇರಿ ಮುಖ್ಯಸ್ಥರು (ಸಂದರ್ಭಾನುಸಾರ) | | | | |
| 01 | ವರ್ಗಾವಣೆ ಬಯಸುವ ಬೋಧಕೇತರ ವೃಂದದ ನೌಕರರುಗಳಿಂದ ಅರ್ಜಿಗಳನ್ನು ಕರೆಯಲು ಪ್ರಕಟಣೆ. | 30.06.2025 | ಆಯುಕ್ತರು ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ<br><br>ವಿಭಾಗದ ಜಿಲ್ಲಾ ಉಪನಿರ್ದೇಶಕರು (ಆಡಳಿತ) | ಸೂಚನೆ:<br>1.ಬೋಧಕೇತರ ಸಮೂಹದ ಸಿ ಮತ್ತು ಡಿ ಗುಂಪಿಗೆ ಸಂಬಂಧಪಟ್ಟಂತೆ ಯಾವುದೇ ವೃಂದದ ಕೋರಿಕೆ/ ಪರಸ್ಪರ ವರ್ಗಾವಣೆ ಅರ್ಜಿಗಳು ಕಡ್ಡಾಯವಾಗಿ ಆಯಾ ಕಛೇರಿ ಮುಖ್ಯಸ್ಥರ ಮುಖಾಂತರದಲ್ಲಿ (ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯಾಗಿದ್ದಲ್ಲಿ ವ್ಯಾಪ್ತಿಯ ಬಿ.ಇ.ಓ ರವರ ಮುಖಾಂತರದಲ್ಲಿ) ಆಯಾ ಉಪನಿರ್ದೇಶಕರಿಗೆ ಸಲ್ಲಿಸತಕ್ಕದ್ದು.<br><br>2. ಆಯಾ ಬಿ.ಇ.ಓ/ ಉಪನಿರ್ದೇಶಕರು ಕಡ್ಡಾಯವಾಗಿ |
| 02 | ವರ್ಗಾವಣೆ ಬಯಸುವ ಬೋಧಕೇತರ ವೃಂದದ ನೌಕರರುಗಳು ನಮೂನೆಯಲ್ಲಿ ಅರ್ಜಿಗಳನ್ನು ಆನ್‌ಲೈನ್ ನಲ್ಲಿ ಆಯಾ ಕಛೇರಿ ಮುಖ್ಯಸ್ಥರಿಗೆ ಸಲ್ಲಿಸುವುದು | 07-06-2025 ರ 5.30 ರೊಳಗಾಗಿ | ವರ್ಗಾವಣೆ ಬಯಸುವ ಎಲ್ಲ ಬೋಧಕೇತರ ನೌಕರರು.<br><br>ಆಯಾ ಕಛೇರಿ ಮುಖ್ಯಸ್ಥರು, ವರ್ಗಾವಣೆ ಅರ್ಜಿಗಳನ್ನು ಆನ್ ಲೈನ್ ನಲ್ಲಿ ಸ್ವೀಕರಿಸುವುದು.<br>(ಈ ಪತ್ರ ಉಲ್ಲೇಖ(2)ರಲ್ಲಿನ ಮಾರ್ಗಸೂಚಿಗಳನ್ವಯ ) | |
| 03 | 1. ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ರವರು ವರ್ಗಾವಣೆ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಅನುಮೋದಿಸಿ ಸಲ್ಲಿಸುವುದು.<br><br>2. ಜಿಲ್ಲಾ ಉಪನಿರ್ದೇಶಕರುಗಳು | 02-06-2025 ರಿಂದ 08-06-2025 | ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ರವರು ವರ್ಗಾವಣೆ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಅನುಮೋದಿಸಿ ಸಲ್ಲಿಸುವುದು. | |

| | | | | |
|---|---|---|---|---|
| | ಅನುಮೋದಿಸಿ ಸಂಬಂಧಿಸಿದ ಪ್ರಾಧಿಕಾರಕ್ಕೆ ಆನ್‌ಲೈನ್ ನಲ್ಲಿ ಸಲ್ಲಿಸುವುದು.<br><br>3. ಇತರೆ ಪ್ರಾಧಿಕಾರಿಯವರು ಅವರ ವ್ಯಾಪ್ತಿಯಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ಅನುಮೋದಿಸುವುದು. | | ನಿರ್ದೇಸಕರುಗಳು ರವರು ಅರ್ಜಿಗಳನ್ನು ಅನುಮೋದಿಸಿ ಸಂಬಧಿಸಿದ ಪ್ರಾಧಿಕಾರಕ್ಕೆ ಆನ್ ಲೈನ್ ನಲ್ಲಿ ಸಲ್ಲಿಸುವುದು.<br><br>ಇತರೆ ಪ್ರಾಧಿಕಾರಿಯವರು ಅವರ ವ್ಯಾಪ್ತಿಯಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ಅನುಮೋದಿಸುವುದು. | ಅರ್ಜಿಗಳು ಸೇರಿದಂತೆ ಎಲ್ಲಾ ಸೇವಾ ವಿವರಗಳನ್ನು ಮತ್ತು ಅರ್ಜಿ ವಿವರಗಳನ್ನು ನಿಯಮಾನುಸಾರವಾಗಿ ಸೂಕ್ತವಾಗಿ ಪರಿಶೀಲಿಸಿ ಅನುಮೋದಿಸಲು ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ. |
| 04 | ಎಲ್ಲಾ ವೃಂದದ ತಾತ್ಕಾಲಿಕ ವರ್ಗಾವಣಾ ಆದ್ಯತಾ ಪಟ್ಟಿ ಪ್ರಕಟಣೆ ವೆಬ್ ಸೈಟ್ ನಲ್ಲಿ ಪ್ರಕಟಣೆ | 09-06-2025 ರ ಬೆಳಗ್ಗೆ 11.00 ಗಂಟೆಗೆ | ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ (ಎಲ್ಲಾ ಸ್ವೀಕೃತ ಅರ್ಜಿಗಳ ಬಗ್ಗೆ)<br><br>ಸಹನಿರ್ದೇಶಕರು (ಆಡಳಿತ) ಅಪರ ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ<br><br>ವಿಭಾಗದ ಜಿಲ್ಲಾ ಉಪನಿರ್ದೇಶಕರು (ಆಡಳಿತ) (ಜಿಲ್ಲಾ ವ್ಯಾಪ್ತಿಯ ಎಲ್ಲಾ ವೃಂದಗಳ ಎಲ್ಲಾ ಅರ್ಜಿಗಳ ಬಗ್ಗೆ) | 3. ವಿಭಾಗೀಯ ಸಹನಿರ್ದೇಶಕರು/ ಸಿಟಿಇ ಪ್ರಾಂಶುಪಾಲರುಗಳು ತಮ್ಮ ಕಛೇರಿಯ ಸಿಬ್ಬಂದಿಗಳ ಅರ್ಜಿಗಳನ್ನು ನೋದಾಯಿಸಿಕೊಂಡು ನಿಯಮಾನುಸಾರ ಅನುಮೋದಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತಾರೆ. |
| 05 | ತಾತ್ಕಾಲಿಕ ವರ್ಗಾವಣೆ ಆದ್ಯತಾ ಪಟ್ಟಿಗೆ ಸಂಬಂಧಪಟ್ಟಂತೆ ಆಕ್ಷೇಪಣೆಗಳನ್ನು ಸಲ್ಲಿಸಲು ಅವಧಿ (ಆಕ್ಷೇಪಣೆಗಳನ್ನು ಈ ಅವಧಿಯಲ್ಲಿ ಸಲ್ಲಿಸದೇ ಇದ್ದಲ್ಲಿ ವಿವರಗಳು ಸರಿಯಾಗಿರುತ್ತವೆ ಎಂದು ಪರಿಗಣಿಸಲಾಗುತ್ತದೆ. ಮತ್ತು ಅಂತಿಮಗೊಳಿಸಲಾಗುತ್ತದೆ. | 09-06-2025 ರಿಂದ 10-06-2025 | ವರ್ಗಾವಣೆ ಬಯಸಿರುವ ಬೋಧಕೇತರ ವೃಂದದ ನೌಕರರು<br><br>ಆಯಾ ಪ್ರಾಧಿಕಾರಿಯವರು | 4. ಆಯುಕ್ತಾಲಯ ಕಛೇರಿಯ ಸಿಬ್ಬಂದಿಗಳ ಅರ್ಜಿಗಳನ್ನು ಆಯಾ ಕಛೇರಿ ಮುಖ್ಯಸ್ಥರು ನೋಂದಾಯಿಸಿಕೊಂಡು ಅನುಮೋದಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತಾರೆ. |
| 06 | ಬಂದಂತಹ ಆಕ್ಷೇಪಣೆಗಳನ್ನು ಸಂಬಂಧಿಸಿದ ಸಕ್ಷಮ ಪ್ರಾಧಿಕಾರವು ನಿಯಮಾನುಸಾರ ಪರಿಶೀಲಿಸಿ, ಆಕ್ಷೇಪಣೆಯನ್ನು ಪುರಸ್ಕರಿಸುವುದು/ ತಿರಸ್ಕರಿಸುವುದು ಮತ್ತು ಅಂತಿಮಗೊಳಿಸವುದು. | 11-06-2025 ರೊಳಗೆ | ಸಕ್ಷಮ ವರ್ಗಾವಣೆ ಪ್ರಾಧಿಕಾರ | 5. ಹಾಗೆ ಆನ್‌ಲೈನ್ ನಲ್ಲಿ ಸ್ವೀಕೃತವಾಗುವ ಮತ್ತು ಅನುಮೋದನೆಗೊಳ್ಳುವ ಎಲ್ಲಾ ಅರ್ಜಿಗಳು ಜೇಷ್ಠತೆ ಅಂಕಗಳ ಆಧಾರದಲ್ಲಿ ತಂತ್ರಾಂಶದಲ್ಲಿಯೇ ಕ್ರೋಢೀಕರಣಗೊಂಡು ಇಳಿಕೆ ಕ್ರಮಾಂಕದಲ್ಲಿ ಮತ್ತು ಕೋರಿರುವ ಆದ್ಯತೆಗನುಸಾರ |
| 07 | ಕೋರಿಕೆ ಹಾಗೂ ಪರಸ್ಪರ ವರ್ಗಾವಣೆಯ ಅಂತಿಮ ಆದ್ಯತಾ ಪಟ್ಟಿ ಪ್ರಕಟಿಸುವುದು. | 11-06-2025 | ಸಕ್ಷಮ ವರ್ಗಾವಣೆ ಪ್ರಾಧಿಕಾರ | |
| 08 | ಎಲ್ಲ ವೃಂದಗಳಿಗೆ ಸಂಬಂಧಪಟ್ಟಂತೆ ಅಂಕಗಳ ಜೇಷ್ಠತೆ ಆಧಾರದಲ್ಲಿ | 12-06-2025 (ಕೌನ್ಸಲಿಂಗ್ ದಿನಾಂಕಗಳಂ | ಸಕ್ಷಮ ವರ್ಗಾವಣೆ ಪ್ರಾಧಿಕಾರವರ ಕಛೇರಿಯಲ್ಲಿ. | |

| | | | | |
|---|---|---|---|---|
| | ಅನುಕ್ರಮವಾಗಿ ಕೌನ್ಸಲಿಂಗ್ ಮೂಲಕ ವರ್ಗಾವಣೆ ನಡೆಸುವುದು. | ದು ವೃಂದ /ಜೇಷ್ಠತಾ ಕ್ರಮಾಂಕಗಳ ಶೆಡೂಲ್ ಅನ್ನು ಪ್ರತ್ಯೇಕವಾಗಿ ಆನ್‌ಲೈನ್ ನಲ್ಲಿ ಪ್ರಕಟಿಸಲಾಗುತ್ತದೆ.) | (ಅರ್ಜಿದಾರರು ಕಾರ್ಯನಿರ್ವಹಿಸುತ್ತಿರುವ ಜಿಲ್ಲೆಯ ಕೇಂದ್ರಗಳಲ್ಲಿಯೇ ಕೌನ್ಸಲಿಂಗ್‌ಗೆ ಹಾಜರಾಗಿ ಕಲಬುರಗಿ ವಿಭಾಗದೊಳಗೆ /ಕಲಬುರಗಿ ವಿಭಾಗದ ಅಂತರ ಜಿಲ್ಲೆಯ ಸ್ಥಳಗಳನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ. | ಪಟ್ಟಿಗೊಳ್ಳುತ್ತದೆ.<br><br>• ಪರಸ್ಪರ ವರ್ಗಾವಣೆ ಅರ್ಜಿದಾರರು ಆಯಾ ಜಿಲ್ಲಾ ಕೇಂದ್ರಗಳಲ್ಲಿಯೇ ಪ್ರತ್ಯೇಕವಾಗಿ ಹಾಜರಾಗತಕ್ಕದ್ದು. ಒಂದನೇ ಅರ್ಜಿದಾರರು ಹಾಜರಿರುವ ಕೇಂದ್ರದಿಂದ ವರ್ಗಾವಣೆಯ ಕುರಿತಂತಯೆ ಆನ್ ಲೈನ್ ಕ್ರಮ ಆಗಿರುತ್ತದೆ.<br><br>• ಕೌನ್ಸಲಿಂಗನ್ನು ಜೇಷ್ಠತೆ ಅನುಸಾರ ಆಯಾ ಜಿಲ್ಲಾ ಕೇಂದ್ರಗಳಲ್ಲಿಯೇ ಹಾಜರಾಗತಕ್ಕದ್ದು.<br><br>• ವಿಭಾಗೀಯ ಸಹನಿರ್ದೇಶಕರು/ಸಿಟಿಇ/ಡಯಟ್ ಕಛೇರಿಯ ಸಿಬ್ಬಂದಿಗಳು ಆಯಾ ಜಿಲ್ಲಾ ಉಪನಿದೇಶಕರು ಕಛೇರಿಯಲ್ಲಿ ಹಾಜರಾಗತಕ್ಕದ್ದು. |
| | ಎಲ್ಲ ವೃಂದಗಳಿಗೆ ಸಂಬಂಧಪಟ್ಟಂತೆ ಅಂಕಗಳ ಜೇಷ್ಠತೆ ಆಧಾರದಲ್ಲಿ ಅನುಕ್ರಮವಾಗಿ ಕೌನ್ಸಲಿಂಗ್ ಮೂಲಕ ವರ್ಗಾವಣೆ ನಡೆಸುವುದು. | 13-06-2025 (ಕೌನ್ಸಲಿಂಗ್ ದಿನಾಂಕಗಳಂದು ವೃಂದ /ಜೇಷ್ಠತಾ ಕ್ರಮಾಂಕಗಳ ಶೆಡೂಲ್ ಅನ್ನು ಪ್ರತ್ಯೇಕವಾಗಿ ಆನ್‌ಲೈನ್ ನಲ್ಲಿ ಪ್ರಕಟಿಸಲಾಗುತ್ತದೆ.) | ಸಕ್ಷಮ ವರ್ಗಾವಣೆ ಪ್ರಾಧಿಕಾರವರ ಕಛೇರಿಯಲ್ಲಿ. (ಅರ್ಜಿದಾರರು ಕಾರ್ಯನಿರ್ವಹಿಸುತ್ತಿರುವ ಜಿಲ್ಲೆಯ ಕೇಂದ್ರಗಳಲ್ಲಿಯೇ ಕೌನ್ಸಲಿಂಗ್ ಗೆ ಹಾಜರಾಗಿ ಅಂತರ ವಿಭಾಗದ/ ತಮ್ಮ ಜಿಲ್ಲೆಯೊಳಗಿನ ಸ್ಥಳಗಳನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ. | |

04.06.25

**(ಡಾ.ಆಕಾಶ್.ಎಸ್)**, ಭಾ.ಆ.ಸೇ
ಅಪರ ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ

**ಇವರಿಗೆ ಮುಂದಿನ ಕ್ರಮಕ್ಕಾಗಿ:**

1. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು/ ಧಾರವಾಡ.
2. ಪ್ರಾಂಶುಪಾಲರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, [ಸಿ.ಟಿ.ಇ] ಕಲಬುರಗಿ (ತಮ್ಮ ವ್ಯಾಪ್ತಿಗೆ ಬರುವ ವರ್ಗಾವಣೆ ಅರ್ಜಿಗಳನ್ನು ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು [ಆಡಳಿತ] ಇವರಿಗೆ ಕಳುಹಿಸಲು ತಿಳಿಸಿದೆ)
3. ಕಲಬುರಗಿ ವಿಭಾಗದ ಎಲ್ಲಾ ಉಪ ನಿರ್ದೇಶಕರು [ಆಡಳಿತ] ಶಾಲಾ ಶಿಕ್ಷಣ ಇಲಾಖೆ,
4. ಕಲಬುರಗಿ ವಿಭಾಗದ ಎಲ್ಲಾ ಉಪನಿರ್ದೇಶಕರು [ಅಭಿವೃದ್ಧಿ] (ತಮ್ಮ ವ್ಯಾಪ್ತಿಗೆ ಬರುವ ವರ್ಗಾವಣೆ ಅರ್ಜಿಗಳನ್ನು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು [ಆಡಳಿತ] ಇವರಿಗೆ ಕಳುಹಿಸಲು ತಿಳಿಸಿದೆ.)

5. ಈ ಕಛೇರಿಯ ಇ-ಆಡಳಿತ ಘಟಕಕ್ಕೆ ನೀಡುತ್ತಾ ವರ್ಗಾವಣೆ ಮಾರ್ಗಸೂಚಿಯನ್ನು ಕಛೇರಿಯ ಅಂತರ್ಜಾಲದಲ್ಲಿ ಪ್ರಕಟಿಸಲು ತಿಳಿಸಿದೆ.

**ಪ್ರತಿಗಳನ್ನು:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.